**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ದೇವದುರ್ಗ.**

Crl.Misc.No.690/2024

PW-1

| | | |
|---|---|---|
| ಸಾಕ್ಷಿದಾರನ ಹೆಸರು | : | ನೂರಜಾನ ಗಂಡ ಖತಲಸಾಬ |
| ವಯಸ್ಸು | : | 28 ವರ್ಷ |
| ಉದ್ಯೋಗ | : | ಕೂಲಿ ಕೆಲಸ |
| ವಾಸಸ್ಥಳ | : | ಕವಿತಾಳ ಹಾ.ವ. ಮುಷ್ಟೂರು |
| ಪ್ರಮಾಣೀಕರಿಸಿದ ದಿನಾಂಕ | : | **14**-02-2025 |

**ಮುಖ್ಯ ವಿಚಾರಣೆಃ ಅರ್ಜಿದಾರಳ ಪರ ಶ್ರೀ ಎಸ ಎಂ ಆರ್ ವಕೀಲಂರಿದ.**

ಎದುರುದಾರನ ನನಗೆ ಗಂಡನಾಗಬೇಕು. ನನ್ನ ಹಾಗೂ ಎದುರುದಾರನ ಮದುವೆ ದಿನಾಂಕ 23-04-2009 ರಂದು ಮುಷ್ಟೂರು ಗ್ರಾಮದ ನಮ್ಮ ಮನೆಯ ಮುಂದೆ ಆಗಿರುತ್ತದೆ. ಮದುವೆಯ ನಂತರ ನಾನು ಗಂಡನ ಮನೆಯಾದ ಕವಿತಾಳ ಗ್ರಾಮಕ್ಕೆ ಸಂಸಾರಿಕ ಜೀವನ ನಡೆಸಲು ಹೋಗಿರುತ್ತೇನೆ. ನಾನು ಕವಿತಾಳ ಗಂಡನ ಮನೆಯಲ್ಲಿ 2 ವರೆ ವರ್ಷ ಇದ್ದು , ನಂತರ ನನ್ನ ಗಂಡ ಉಡುಪಿಯಲ್ಲಿ ಕೆಲಸ ಮಾಡುತ್ತಿದ್ದುರಿಂದ ಅಲ್ಲಿಗೆ ನನ್ನನ್ನು ಕರೆದುಕೊಂಡು ಹೋಗಿದ್ದು. ಉಡುಪಿಯಲ್ಲಿ ಅಂದಾಜು 2 ವರ್ಷ ಎದುರುದಾರನೊಂದಿಗೆ ಸಂಸಾರಿಕ ಜೀವನ ನಡೆಸಿರುತ್ತೇನೆ. ಉಡುಪಿಯಲ್ಲಿ ಇದ್ದಾಗ ನನಗೆ ಕುಡಿದು ಬಂದು ದೈಹಿಕ ಕಿರುಕುಳ ನೀಡಿರುತ್ತಾನೆ ಮತ್ತು ಸದರಿ ಉಡುಪಿಯಲ್ಲಿ ಇದ್ದಾಗ ರಾತ್ರಿಯೆ ನನ್ನನ್ನು ಅಲ್ಲಿಯೆ ಬಿಟ್ಟು ಹೋಗಿರುತ್ತಾನೆ. ನಂತರ ನಾನು ನನ್ನ ತಂದೆಗೆ ಫೋನು ಮೂಲಕ ವಿಷಯ ತಿಳಿಸಿದ್ದು , ನಂತರ ನನ್ನ ತಂದೆ ನನ್ನನ್ನು ತವರು ಮನೆಗೆ ಕರೆದುಕೊಂಡು ಬಂದಿರುತ್ತಾರೆ. ನಂತರ ನಾನು ಕವಿತಾಳ ಗ್ರಾಮದ ನನ್ನ ಗಂಡನ ಮನೆಗೆ ಹೋದಾಗ ನನ್ನ ಅತ್ತೆ - ಮಾವ ನನ್ನನ್ನು ಮನೆಯಲ್ಲಿ ಸೇರಿಸಿಕೊಂಡಿರುವುದಿಲ್ಲ. ನನ್ನ ಗಂಡ ಲಾರಿ ಚಾಲಕನಾಗಿರುತ್ತಾನೆ. ಕಳೆದ 11-12 ವರ್ಷಗಳಿಂದ ನಾನು ತವರು ಮನೆಯಲ್ಲಿ ವಾಸವಾಗಿದ್ದೆನೆ. ಎದುರುದಾರನು ನಾನು ತವರು ಮನೆಯಲ್ಲಿ ಇದ್ದಾಗ ನನ್ನನ್ನು ಕರೆದುಕೊಂಡು ಹೋಗಲು ಬಂದಿರುವುದಿಲ್ಲ. ನಾನು ನನ್ನ ಗಂಡನ ಮನೆಗೆ ಹೋದರೆ ನನ್ನನ್ನು ಸೇರಿಸಿಕೊಳ್ಳುತ್ತಿಲ್ಲ , ನೀನು ನಮಗೆ ಬೇಡ ಎಂದು ಹೇಳುತ್ತಿದ್ದಾರೆ. ಈಗ ಕಳೆದ 8 ತಿಂಗಳ ಹಿಂದೆ ಎದುರುದಾರನನ್ನು ನನಗೆ ಭಾಗ ನೀಡುವಂತೆ ಹೇಳಿದ್ದಕ್ಕೆ ಎದುರುದಾರ ಮತ್ತು ಆತನ ತಂದೆ ತಾಯಿ ರಾತ್ರಿ ನನ್ನ ತವರು ಮನೆಗೆ ಬಂದು ನನಗೆ ಹೊಡೆದು ಹೋಗಿರುತ್ತಾರೆ. ಆ ಕುರಿತು ಗಬ್ಬೂರು ಪೊಲೀಸ ಠಾಣೆಯಲ್ಲಿ ಪ್ರಕರಣ ದಾಖಲಿಸಿರುತ್ತೇವೆ. ಎದುರುದಾರ ದಿನಕ್ಕೆ 2-3 ಸಾವಿರ ಸಂಪಾದನೆ ಮಾಡಿರುತ್ತಾನೆ. ಹುಸೇನಪುರ ಸೀಮೆಯಲ್ಲಿ ಎದುರುದಾರನಿಗೆ ಸೇರಿದ 7 ಎಕರೆ 29 ಗುಂಟೆ ಜಮೀನು ಇರುತ್ತದೆ. ಸದರಿ ಜಮೀನಿನಿಂದ ವಾರ್ಷಿಕ 7-8 ಲಕ್ಷ ಆದಾಯ ಬರುತ್ತದೆ. ಎದುರುದಾರ ಈವರೆಗೂ

ನನಗೆ ಜೀವನಾಂಶಕ್ಕೆ ಯಾವುದೆ ಹಣವನ್ನು ನೀಡಿರುವುದಿಲ್ಲ. ನನಗೆ ತಿಂಗಳಿಗೆ 30 ಸಾವಿರದ ಅವಶ್ಯಕತೆ ಇರುತ್ತದೆ. ಸದರಿ 30 ಸಾವಿರ ಹಣವನ್ನು ಎದುರುದಾರ ನೀಡಲು ಸಮರ್ಥನಾಗಿರುತ್ತಾನೆ.

ಈ ಹಂತದಲ್ಲಿ ಮುಂದುವರೆದ ಮುಖ್ಯ ವಿಚಾರಣೆಗೆ ಕಾಲವಕಾಶ ಕೇಳಿದ್ದು , ಕಾಲವಕಾಶ ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಖ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ)

ಓ.ಹೇ.ಕೇ.ಸರಿ.ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ,
ದೇವದುರ್ಗ.